ಕೆರೆಯಿಂದ ಕುಡಿಯುವ ನೀರು ಪೂರೈಕೆಯಲ್ಲಿ ಕಲುಷಿತಗೊಂಡಿದೆ ಎಂದು ಏನು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಆ ಬಗ್ಗೆ ನಾವು ಈಗಾಗಲೇ ಆ ಟ್ಯಾಂಕ್‌ನ ಸುತ್ತಮುತ್ತಲು ಫೆನ್ಸಿಂಗ್ ಮಾಡುವಂತಹ ಕೆಲಸ ಈಗ ಆರಂಭ ಮಾಡಿದ್ದೇವೆ. ಅದೇ ರೀತಿಯಲ್ಲಿ ಕಾರಂಜಾ ಎಲೆಕ್ಟ್ರಿಸಿಟಿ ಮತ್ತು ಒಳಚರಂಡಿ ನೀರು ಬರುತ್ತಿದೆ ಅಂತ ಏನು ಹೇಳಿದ್ದಾರೆ. ಆ ಬಗ್ಗೆ ಸರ್ಕಾರ ಒಂದು ಹೊಸ ಪ್ರೊಪೋಜಲ್ ಮಾಡಿ ಹೊಸ ಒಳಚರಂಡಿ ವ್ಯವಸ್ಥೆಯನ್ನು ಮಾಡಲು ಪ್ರಯತ್ನ ಮಾಡುತ್ತೇವೆ.

ಶ್ರೀ ಚಂದ್ರಕಾಂತ ಗುರಪ್ಪ ಬೆಲ್ಲದ್:- ಮಾನ್ಯ ಅಧ್ಯಕ್ಷರೇ ಈಗಾಗಲೇ ಹುಬ್ಬಳ್ಳಿ ಧಾರವಾಡ ಪ್ರಾಧಿಕಾರದಿಂದ ಫೆನ್ಸಿಂಗ್ ಹಾಕಿದ್ದೇವೆಂದು ಹೇಳಿದ್ದೀರಿ. ಅದನ್ನು ಈಗಾಗಲೇ ಕಟ್ ಮಾಡುತ್ತಿದ್ದಾರೆ. ಇದು ಏನಾದರೂ ಸರ್ಕಾರದ ಗಮನಕ್ಕೆ ಬಂದಿದೆಯೇ? ಫೆನ್ಸಿಂಗ್ ಹಾಕಬೇಕಾದಂತಾದ್ದು ಬೇಕಾದಷ್ಟು ಪ್ರದೇಶ ಇದೆ. ಈ ಪ್ರಕಾರ ನೀವು ಬೇಲಿ ಹಾಕಿದರೆ ಜನ ದಿವಸ ಕಟ್ ಮಾಡುತ್ತಾರೆ. ಅವರಿಗೆ ಬಟ್ಟೆ ಒಗೆಯಲು ಬೇರೆ ಏನಾದರೂ ವ್ಯವಸ್ಥೆ ಮಾಡಿಕೊಡಬೇಕು. ದನಕರುಗಳು ತೊಳೆಯಲು ಏನಾದರೂ ವ್ಯವಸ್ಥೆ ಮಾಡಿಕೊಡಬೇಕು. ಆ ರೀತಿ ಮಾಡಿದರೆ ಆ ಬೇಲಿ ಉಳಿಯುತ್ತದೆ ಇಲ್ಲದಿದ್ದರೆ ಉಳಿಯುವುದಿಲ್ಲ. ಅದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ.

ಶ್ರೀ ಮಿರಾಜುದ್ದೀನ್ ನಿಜಾಮುದ್ದೀನ್ ಪಟೇಲ್:- ಮಾನ್ಯ ಅಧ್ಯಕ್ಷರೇ, ಈಗಾಗಲೇ ಅಲ್ಲಿ 50 ಪರ್ಸೆಂಟ್ ಫೆನ್ಸಿಂಗ್ ಕೆಲಸ ಆಗಿದೆ. ಇನ್ನುಳಿದ ಕೆಲಸವನ್ನು ನಾವು ಪೂರ್ಣ ಮಾಡುತ್ತೇವೆ.

ಶ್ರೀ ಚಂದ್ರಕಾಂತ ಗುರಪ್ಪ ಬೆಲ್ಲದ್:- ಹಾಕಿರುವ ಫೆನ್ಸಿಂಗ್ ಕಟ್ ಮಾಡುತ್ತಿದ್ದಾರೆ.

ಅಧ್ಯಕ್ಷರು:- ಬದಲಿ ವ್ಯವಸ್ಥೆ ಮಾಡಬೇಕು.

ಶ್ರೀ ಮಿರಾಜುದ್ದೀನ್ ನಿಜಾಮುದ್ದೀನ್ ಪಟೇಲ್:- ಮಾಡಿಸುತ್ತೇವೆ.

ವಿಷಯ:- ಹುಬ್ಬಳ್ಳಿ ಧಾರವಾಡದಲ್ಲಿ ನೀರಿನ ಸಮಸ್ಯೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 139 (897)

ಶ್ರೀ ಅಶೋಕ ಕಾಟ್ವೆ (ಹುಬ್ಬಳ್ಳಿ ನಗರ):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ 2ನೇ ಮಹಾನಗರವಾದ ಹುಬ್ಬಳ್ಳಿ-ಧಾರವಾಡದಲ್ಲಿ ನೀರಿನ ಸಮಸ್ಯೆ ವಿಪರೀತವಾಗಿದ್ದು ಇದನ್ನು ತಪ್ಪಿಸಲು ಸರ್ಕಾರದವರು ಪರಿಶೀಲಿಸುವರೆ?

ಆ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಬಿ.ಎನ್.ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):-

ಅ) ಪರಿಶೀಲಿಸಿದೆ.

ಆ) 1. ಈ ಸಮಸ್ಯೆಯನ್ನು ಪರಿಹರಿಸಲು ರೂ.700.00 ಲಕ್ಷ ಅಂದಾಜಿನಲ್ಲಿ ಜಲ ಸಂಗ್ರಹಾಲಯಗಳ ನಿರ್ಮಾಣ ಮತ್ತು ವಿತರಣಾ ಜಾಲ ನವೀಕರಣ ಕೆಲಸ ಕೈಗೊಂಡಿದ್ದು ಶೇಕಡ 90ರಷ್ಟು ಕೆಲಸ ಮುಗಿದಿದ್ದು ಉಳಿದ ಕೆಲಸಗಳನ್ನು ಶೀಘ್ರದಲ್ಲಿ ಮುಗಿಸಲಾಗುವುದು. ಇದರಿಂದ ಅವಳಿ ನಗರಕ್ಕೆ ತಲಾ ದಿನಂಪ್ರತಿ 25ರಿಂದ 30 ಗ್ಯಾಲನ್ ನೀರನ್ನು ಸರಬರಾಜು ಮಾಡಲಾಗುವುದು.

2. ಇದಲ್ಲದೆ ಶಾಶ್ವತ ಕುಡಿಯುವ ನೀರಿನ ಯೋಜನೆಗೆ ಸರ್ಕಾರದಿಂದ ಮಲಪ್ರಭಾ 2ನೇ ಹಂತದ ಯೋಜನೆಯನ್ನು ರೂ.650.00 ಲಕ್ಷಗಳ ಅಂದಾಜಿನಲ್ಲಿ ಕಾರ್ಯಗತಗೊಳಿಸಿ ದಿನಂಪ್ರತಿ ಒಟ್ಟು 11.00ರಿಂದ 12 ದಶಲಕ್ಷ ಗ್ಯಾಲನ್ ನೀರು ಸರಬರಾಜು ಮಾಡಲು ಸಾಧ್ಯವಾಗಿದೆ.

ಶ್ರೀ ಚಂದ್ರಕಾಂತ್ ಬೆಲ್ಲದ್ (ಶ್ರೀ ಅಶೋಕ ಕಾಟ್ವೆಯವರ ಪರವಾಗಿ):- ಮಾನ್ಯ ಅಧ್ಯಕ್ಷರೇ, ರಾಜ್ಯದ ಎರಡನೆಯ ಮಹಾನಗರವಾಗಿರುವ ಹುಬ್ಬಳ್ಳಿ-ಧಾರವಾಡದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳ ವಿಪರೀತವಾಗಿದ್ದು ಇದನ್ನು ತಪ್ಪಿಸಲು ಸರ್ಕಾರದವರು ಪರಿಶೀಲಿಸುವರೇ ಅಂತ ಕೇಳಿದ್ದಕ್ಕೆ ''ಪರಿಶೀಲಿಸಲಿದೆ'' ಅಂತ ಹೇಳುತ್ತಿದ್ದಾರೆ. ಅಲ್ಲಿ ಜನ ನೀರಿನ ಬವಣೆಯಿಂದ ಪ್ರತಿದಿನ ಹೋರಾಟ ಮಾಡುತ್ತಿದ್ದಾರೆ, ರಸ್ತೆ ತಡೆ ಮಾಡುತ್ತಿದ್ದಾರೆ, ಹೆದ್ದಾರಿ ಮೇಲೆ ತೊಂದರೆ ಕೊಡುತ್ತಿದ್ದಾರೆ. ಸಾಕಷ್ಟು ದಿವಸಗಳಿಂದ ಸರ್ಕಾರದ ಗಮನದಲ್ಲಿ ಇದ್ದರೂ ಸಹ ಸರಿಯಾದಂತಹ ಕ್ರಮ ತೆಗೆದುಕೊಳ್ಳುತ್ತಿಲ್ಲ. ಅಲ್ಲಿ ಟ್ಯಾಂಕ್‌ಗಳನ್ನು ಕಟ್ಟುತ್ತಿದ್ದಾರೆ ಪೂರ್ತಿ ಆಗಿಲ್ಲ. ಗಬ್ಬೂರಿನಲ್ಲಿರುವ ಟ್ಯಾಂಕ್ ಅಯೋಧ್ಯದಲ್ಲಿರುವ ಟ್ಯಾಂಕ್ ಹಳೆ ಹುಬ್ಬಳ್ಳಿಯಲ್ಲಿರುವ ಟ್ಯಾಂಕ್ ಪೂರ್ಣ ಆಗಲಿಲ್ಲ. ಇನ್ನು ಕೆಲವು ಟ್ಯಾಂಕ್‌ಗಳು ಸೋರುತ್ತಿವೆ. ನವನಗರದಲ್ಲಿ ಟ್ಯಾಂಕ್ ಸೋರುತ್ತಿವೆ. ಉಣಕಲ್ಲು ಟ್ಯಾಂಕ್ ಪೂರ್ಣ ಆಗಲಿಲ್ಲ. ಧಾರವಾಡದ ಲಕ್ಕವಳ್ಳಿಯಲ್ಲಿರುವ ಟ್ಯಾಂಕ್ ಪೂರ್ಣ ಆಗಲಿಲ್ಲ. ಇದು ಸರ್ಕಾರದ ಗಮಕ್ಕೆ ಬಂದಿದೆಯೇ ಹೇಗೆ? ಯಾವಾಗ ತೀವ್ರವಾದ ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಬಿ.ಎನ್.ಬಚ್ಚೇಗೌಡ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಬೆಲ್ಲದ್‌ರವರು ಈ ಪ್ರಶ್ನೆಯನ್ನು ಮೊನ್ನೇ ಕೇಳಿದ್ದರು ಈ ಬಗ್ಗೆ ಸಾಕಷ್ಟು ತಿಳಿಸಿ ನಾನು ಸ್ಥಳಕ್ಕೆ ಭೇಟಿ ಕೊಟ್ಟು ಇಲ್ಲಿರತಕ್ಕಂಥ ಮಾನ್ಯ ಶಾಸಕರನ್ನು ಸೇರಿಸಿಕೊಂಡು ನಮ್ಮ ಕಛೇರಿಯಲ್ಲಿ ಈ ಬಗ್ಗೆ ಪ್ರಸ್ತಾಪ ಮಾಡುವುದು ಎಂದು ಹೇಳಿದ್ದೆ. ಈಗಾಗಲೇ ಮಲಪ್ರಭಾ ಒಂದನೇ ಮತ್ತು ಎರಡನೇ ಹಂತದ ನೀರನ್ನು ಹುಬ್ಬಳ್ಳಿ ಮತ್ತು ಧಾರವಾಡ ಮಹಾನಗರಕ್ಕೆ 11 ದಶಲಕ್ಷ ನೀರು ಸರಬರಾಜು ಮಾಡಲಾಗುತ್ತಿದೆ. ಮತ್ತು 8 ದಶಲಕ್ಷ ನೀರನ್ನು ನೀರಸಾಗರದಿಂದ ಸರಬರಾಜು ಮಾಡಲಾಗುತ್ತಿದೆ. ಆದ್ದರಿಂದ ನೀರಿಗೆ ಸಮಸ್ಯೆ ಇಲ್ಲ. ಇಲ್ಲಿ ಸಮಸ್ಯೆ ಇರುವುದು ಅಂದರೆ ಡಿಸ್ಟ್ರಿಬ್ಯೂಶನ್ ಸಿಸ್ಟಂ, ಓವರ್ ಹೆಡ್ ಟ್ಯಾಂಕ್‌ಗಳನ್ನು ಕಟ್ಟತಕ್ಕಂಥಾದ್ದು, ಮತ್ತು ಗ್ರೌಂಡ್ ಲೆವಲ್ ರಿಜರ್ವಾಯರ್ ಲೀಕೇಜ್ ಇರತಕ್ಕಂಥಾದ್ದು ಪೈಪ್‌ಲೈನ್‌ನಲ್ಲಿ ಲೀಕೇಜ್ ಇರುವಂಥಾದ್ದನ್ನು ತಾವು ಈಗಾಗಲೇ

ತಿಳಿಸಿದ್ದೀರಿ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ ಅದನ್ನು ಸರಿಪಡಿಸಬೇಕು. ಮಾಡಿರತಕ್ಕಂಥ ಯೋಜನೆಗಳಲ್ಲಿ ಡಿಫೆಕ್ಟ್ ಇದೆ. ನಾನು ಸ್ಥಳಕ್ಕೆ ಭೇಟಿ ಕೊಟ್ಟು ಅದಷ್ಟು ಬೇಗ ಅದನ್ನು ಸರಿಪಡಿಸುವಂತಹ ಕಾರ್ಯಕ್ರಮ ಕೈಗೊಳ್ಳುತ್ತೇನೆ. ನಾನು ತಮಗೆ ತಿಳಿಸಿದ್ದೆ, ನಮ್ಮ ಕಛೇರಿಯಲ್ಲಿ ಈ ಬಗ್ಗೆ ಪ್ರಸ್ತಾಪ ಮಾಡಿ ಅಂತ ಮಾನ್ಯ ಸಭಾಧ್ಯಕ್ಷರು ಸಹ ಆ ದಿವಸ ನನಗೆ ಆದೇಶ ಕೊಟ್ಟಿದ್ದಾರೆ. ಆದಷ್ಟು ಬೇಗ ನಾನು ತಮ್ಮನ್ನು ಕರೆದು ನಮ್ಮ ಕಛೇರಿಯಲ್ಲಿ ಪ್ರಸ್ತಾಪ ಮಾಡಿ ನಮ್ಮ ಇಲಾಖಾ ಮುಖ್ಯ ಇಂಜಿನೀಯರ್ ಎಲ್ಲಾ ಸೇರಿ ಅದನ್ನು ಸರಿಪಡಿಸುವಂತಹ ಕಾರ್ಯವನ್ನು ಮಾಡೋಣ.

ಶ್ರೀ ಚಂದ್ರಕಾಂತ ಬೆಲ್ಲದ್:- ಮಾನ್ಯ ಅಧ್ಯಕ್ಷರೇ, ನಾನು ಹಿಂದೆ ಶಾಸಕನಾಗಿದ್ದಾಗ ಸಹ ಸವದತ್ತಿಯಿಂದ ಧಾರವಾಡದವರೆಗೂ ಬರುವ ಪೈಪ್‌ಲೈನ್ ನೀರು ಸರಬರಾಜು ವ್ಯವಸ್ಥೆ ಏನು ಇದೆ ಅದು ಆಗ 25 ಕಡೆ ಸೋರುತ್ತಿದ್ದರೆ ಈಗ ಅದು 250 ಕಡೆ ಸೋರುತ್ತಿದೆ.

ಅಧ್ಯಕ್ಷರು:- ಆಗ ಮಾನ್ಯ ಬಚ್ಚೇಗೌಡರು ಮಂತ್ರಿಯಾಗಿರಲಿಲ್ಲ. ತಾವು 1985ರಲ್ಲಿ ಬಂದಿದ್ದು ಆಗ ತಾವು ಎಲ್ಲಿ ಇದ್ದಿರಿ? ಈಗ ಎಲ್ಲಿದ್ದೀರಿ? ಎಲ್ಲಾ ಬದಲಾವಣೆ ಆಗುತ್ತಿದೆ.

ಶ್ರೀ ಚಂದ್ರಕಾಂತ ಬೆಲ್ಲದ್:- ಈಗಲೂ ಕೇಳುವ ಹಂತದಲ್ಲಿದ್ದೇವೆ. ಆಗಲೂ ಕೇಳಿದ್ದೇವೆ.

ಡಾ: ಎಂ.ಪಿ.ಕರ್ಕಿ:- ಮಾನ್ಯ ಅಧ್ಯಕ್ಷರೇ, ಮಂತ್ರಿಗಳು ಬರುತ್ತಾರೆ ಹೋಗುತ್ತಾರೆ. ಆದರೆ ಸರ್ಕಾರ ಇರುತ್ತದೆ. ಇದು ಸರ್ಕಾರದ ಜವಾಬ್ದಾರಿ. ಮಂತ್ರಿಗಳು ಜವಾಬ್ದಾರಿ ಅಲ್ಲ.

ಅಧ್ಯಕ್ಷರು:- ನಾನು ಒಪ್ಪುತ್ತೇನೆ.

ಶ್ರೀ ಚಂದ್ರಕಾಂತ ಬೆಲ್ಲದ್:- ಮಾನ್ಯ ಅಧ್ಯಕ್ಷರೇ, 225 ಕಡೆ ಏನು ಸೋರುತ್ತಿದೆ ನೀರು ಅದನ್ನು ಬಂದ್ ಮಾಡುವಂತಹ ಕ್ರಮ ತೆಗೆದುಕೊಳ್ಳಿ. ಆಮೇಲೆ ವಿದ್ಯುಚ್ಛಕ್ತಿ ಇಲಾಖೆ, ಕಾರ್ಪೊರೇಷನ್, ಜಲಮಂಡಲಿ ಇವರಲ್ಲಿ ಕೋ ಆರ್ಡಿನೇಶನ್ ಮಾಡಿ. ನೀರು ಪೂರ್ಣ ವಿತರಣೆಯಾಗುವಂತಹ ಕೆಲಸ ಮಾಡಬೇಕು.

ಅಧ್ಯಕ್ಷರು:- ಮಾಡುತ್ತಾರೆ.

ವಿಷಯ:- ವರದಾ ನದಿಯಿಂದ ಸಂಯುಕ್ತ ಕುಡಿಯುವ ನೀರು ಯೋಜನೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 140 (942)

ಶ್ರೀ ಮಂಜುನಾಥ ಸಿ.ಕುನ್ನೂರ್ (ಶಿಗ್ಗಾಂವ್):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವರದಾ ನದಿಯಿಂದ ಶಿಗ್ಗಾಂವ, ಸವಣೂರು, ಬಂಕಾಪುರ, ಸಂಯುಕ್ತ